ಕಟ್ಟಡಗಳನ್ನು ಕೆಡವಿ ಹಾಕಲಾಗಿರುತ್ತದೆ. ಇದಲ್ಲದೆ ವಿವಿಧ ನ್ಯಾಯಾಲಯಗಳಲ್ಲಿ 30 ದಾವೆಗಳನ್ನು ದಾಖಲು ಮಾಡಲಾಗಿದೆ.

2256 (3217) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ):– ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ವಿದ್ಯಾರಣ್ಯಪುರದಿಂದ ವಿವಿಧ ಸ್ಥಳಗಳಿಗೆ ಬೆಳಿಗ್ಗೆ 7 ರಿಂದ 10 ಗಂಟೆ ಹಾಗೂ ಸಂಜೆ ವಿವಿಧ ಸ್ಥಳಗಳಿಂದ ವಿದ್ಯಾರಣ್ಯಪುರಕ್ಕೆ ಹೋಗುವ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಪ್ರತಿ ಬಸ್ಸಿನ ಆದಾಯವೆಷ್ಟು; (ವಿವರ ನೀಡುವುದು);

ಆ) ಬೆಳಗಿನ ಸಮಯಕ್ಕೆ ಹೋಲಿಸಿದಲ್ಲಿ, ಸಾಯಂಕಾಲ ಸಮಯದಲ್ಲಿ ಆದಾಯ ಕಡಿಮೆ ಇದೆಯೇ;

ಇ) ಪ್ರಯಾಣಿಕರಿಂದ ಬೇಡಿಕೆ ಬಂದಲ್ಲಿ ತಕ್ಷಣ ಬೇಡಿಕೆಗೆ ತಕ್ಕಂತೆ ಹೊಸ ಬಸ್ ಸಂಚಾರ ಆರಂಭಿಸಲಾಗುವುದು ಎಂದು ಸಂಸ್ಥೆ ಪ್ರಕಟಿಸಿದ್ದರೂ ಸಹ ಬಿ.ಇ.ಎಲ್. ವೃತ್ತದಿಂದ ವಿದ್ಯಾರಣ್ಯಪುರಕ್ಕೆ ಸಂಜೆ 6 ರಿಂದ ರಾತ್ರಿ 10 ಗಂಟೆಯವರೆಗೆ ಒಂದು ಮಿನಿ ಬಸ್ ಸಂಚಾರ ಆರಂಭಿಸಲು ಶಾಸಕರು ಪತ್ರ ಬರೆದಿದ್ದರೂ ಬಸ್ ಸಂಚಾರ ಆರಂಭಿಸದಿರಲು ಕಾರಣವೇನು;

ಈ) ಪ್ರತಿದಿನ ಸಂಜೆ ಹಾಗೂ ರಾತ್ರಿ ಸಮಯದಲ್ಲಿ ಬಿ.ಇ.ಎಲ್. ವೃತ್ತದಿಂದ ವಿದ್ಯಾರಣ್ಯಪುರಕ್ಕೆ ಅನೇಕ ಖಾಸಗಿ ವ್ಯಾನ್ ಹಾಗೂ ಬಸ್‌ನವರು ಟ್ರಿಪ್ ಮಾಡುತ್ತಿರುವುದರಿಂದ ಸಂಸ್ಥೆಗೆ ನಷ್ಟವಾಗುತ್ತಿಲ್ಲವೇ;

ಉ) ಇದನ್ನು ತಪ್ಪಿಸಲು ತೆಗೆದುಕೊಂಡ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಅನುಬಂಧದಲ್ಲಿ ನೀಡಲಾಗಿದೆ.

ಆ) ಇಲ್ಲ.

ಇ) ಸಂಜೆ 6 ಗಂಟೆಯ ನಂತರ 36 ಬಸ್ಸುಗಳಲ್ಲಿ 73 ಸುತ್ತುವಳಿಗಳ ಸೌಲಭ್ಯ ಒದಗಿಸಲಾಗಿರುವುದರಿಂದ, ಬಿ.ಇ.ಎಲ್. ವೃತ್ತದಿಂದ ವಿದ್ಯಾರಣ್ಯಪುರಕ್ಕೆ ಪ್ರತ್ಯೇಕವಾಗಿ ಮಿನಿ ಬಸ್ಸಿನ ಅವಶ್ಯಕತೆ ಕಂಡು ಬರುವುದಿಲ್ಲ.

ಈ) ಹೌದು.

ಉ) ಈ ಸಂಬಂಧ, ಆಗಿಂದಾಗ್ಗೆ ಧಾಳಿ ನಡೆಸಿ ಅನಧಿಕೃತ ಆಚರಣೆ ತಪ್ಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಅನುಬಂಧ

ಬೆಂಗಳೂರು ನಗರದ ವಿವಧ ಬಡಾವಣೆಗಳಿಂದ ವಿದ್ಯಾರಣ್ಯಪುರಕ್ಕೆ ಆಚರಣೆ ಮಾಡುವ ಮಾರ್ಗಗಳ ಪ್ರತಿದಿನದ ಸರಾಸರಿ ಆದಾಯದ ವಿವರಗಳು

ಕ್ರ. ಸಂ	ಮಾರ್ಗ ಸಂಖ್ಯೆ	ಇಂದ	ವರೆಗೆ	ಒಟ್ಟು ಬಸ್ಸುಗಳು	ಸರಾಸರಿ ಆದಾಯ (ರೂ.ಗಳಲ್ಲಿ)
1	2	3	4	5	6
1.	269–B	ಕೆಂಪೇಗೌಡ ಬಸ್ ನಿಲ್ದಾಣ	ವಿದ್ಯಾರಣ್ಯಪುರ	2	4212.00
		(ಮಾರ್ಗ ರಾಮಚಂದ್ರಪುರ)			
2.	275–D	ಕೆಂಪೇಗೌಡ ಬಸ್ ನಿಲ್ದಾಣ	ವಿದ್ಯಾರಣ್ಯಪುರ	1	2392.00
		(ಮಾರ್ಗ ಯಶವಂತಪುರ)			
3.	276	ಕೆಂಪೇಗೌಡ ಬಸ್ ನಿಲ್ದಾಣ	ವಿದ್ಯಾರಣ್ಯಪುರ	9	4782.00
4.	276–A	ಶಿವಾಜಿನಗರ ಬಸ್ ನಿಲ್ದಾಣ	ವಿದ್ಯಾರಣ್ಯಪುರ	4	4950.00
5.	276–E	ಕೃ.ರಾ. ಮಾರುಕಟ್ಟೆ	ವಿದ್ಯಾರಣ್ಯಪುರ	3	4363.00
6.	276-H	ಜೆ.ಪಿ.ನಗರ 6ನೇ ಹಂತ	ವಿದ್ಯಾರಣ್ಯಪುರ	4	3928.00
7.	276- J	ಕೆಂಪೇಗೌಡ ಬಸ್ ನಿಲ್ದಾಣ	ಯಲಹಂಕ	1	3865.00
8.	401- B	ಹಂಪಿನಗರ (RPC Layout)	ಯಲಹಂಕ	11	5277.00

1	2	3	4	5	6
			(ಮಾರ್ಗ ವಿದ್ಯಾರಣ್ಯಪುರ)		
9.	401-K	ಯಲಹಂಕ	ಕೆಂಗೇರಿ	14	3572.00
			(ಮಾರ್ಗ ವಿದ್ಯಾರಣ್ಯಪುರ)		
10.	401-R	ಯಲಹಂಕ	ಐ.ಇ.ಎಂ.ಎಲ್. 5ನೇ ಹಂತ	7	4292.00
11.	MBS-9	ವಿದ್ಯಾರಣ್ಯಪುರ	ಇಸ್ರೋ ಬಡಾವಣೆ	6	4490.00

2257(3218) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯವು ಐ.ಟಿ. ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವಂತೆ ಬಿ.ಟಿ. ಕ್ಷೇತ್ರದಲ್ಲಿ ಮುಂಚೂಣಿಯ ಸಾಧಿಸುವಂತೆ ರಾಜ್ಯ ಸರ್ಕಾರ ತೆಗೆದುಕೊಂಡ ಕ್ರಮಗಳೇನು; (ವಿವರ ನೀಡುವುದು)

ಆ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಹೊಸದಾಗಿ ಸ್ಥಾಪಿಸಲ್ಪಟ್ಟ ಬಿ.ಟಿ. ಕ್ಷೇತ್ರದ ಉದ್ಯಮಗಳು ಎಷ್ಟು; (ಸಂಸ್ಥೆಯ ವಿವರ, ವಿಳಾಸ ನೀಡುವುದು);

ಇ) ರಾಜ್ಯದಲ್ಲಿ ಜೈವಿಕ ತಂತ್ರಜ್ಞಾನ ಉಪಯೋಗಿಸಿ ಬರ ನಿರೋಧಕ, ಕೀಟ ಹಾಗೂ ರೋಗ ನಿರೋಧಕ ತಳಿಗಳನ್ನು ಉತ್ಪಾದನೆ ಮಾಡಲು ತೆಗೆದುಕೊಂಡ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು)

ಅ) ಕರ್ನಾಟಕ ರಾಜ್ಯವು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಮುಂಚೂಣಿ ರಾಜ್ಯವೆಂದು ಗುರುತಿಸಲ್ಪಟ್ಟಿರುವಂತೆಯೆ ಜೈವಿಕ ತಂತ್ರಜ್ಞಾನ ಕ್ಷೇತ್ರದಲ್ಲಿಯೂ ಸಹ ಕ್ರಾಂತಿಯನ್ನುಂಟು ಮಾಡುವ ಉದ್ದೇಶ ಹೊಂದಿದೆ. ಜೈವಿಕ ತಂತ್ರಜ್ಞಾನ ಕ್ಷೇತ್ರದಲ್ಲಿನ ಉದ್ದಿಮೆದಾರರು, ವಿಜ್ಞಾನಿಗಳು ಮತ್ತು ಪರಿಣಿತರನ್ನೊಳಗೊಂಡ ಜೈವಿಕ ತಂತ್ರಜ್ಞಾನ ದಾರ್ಶನಿಕ ತಂಡದ ರಚನೆಯೊಂದಿಗೆ ರಾಷ್ಟ್ರದಲ್ಲೇ ಪ್ರಥಮ ಬಾರಿಗೆ ಸಹಸ್ರ ಮಾನದ ಜೈವಿಕ ತಂತ್ರಜ್ಞಾನ ನೀತಿಯನ್ನು 2001ರಲ್ಲಿ ಜಾರಿಗೆ ತಂದಿರುತ್ತದೆ. ಸದರಿ ನೀತಿಯಲ್ಲಿ ಜೈವಿಕ ತಂತ್ರಜ್ಞಾನ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಅಗತ್ಯವಿರುವ ಹಲವು ಕಾರ್ಯಕ್ರಮಗಳು ಹಾಗು ಯೋಜನೆಗಳನ್ನು ರೂಪಿಸಿದ್ದು ಅವುಗಳನ್ನು ಅನುಷ್ಠಾನಗೊಳಿಸುತ್ತಾ ಬರಲಾಗಿದೆ. ಹಾಗೂ ಪ್ರತಿ ವರ್ಷ ಬಯೋ ಬೆಂಗಳೂರು ಮೇಳವನ್ನು ನಡೆಸಲಾಗುತ್ತಿದೆ.

ಜೈವಿಕ ತಂತ್ರಜ್ಞಾನ ಕ್ಷೇತ್ರದಲ್ಲಿ ಬಂಡವಾಳವನ್ನು ಆಕರ್ಷಿಸಲು ಹಲವಾರು ರಿಯಾಯಿತಿ ಮತ್ತು ವಿನಾಯಿತಿಗಳನ್ನು ನೀಡುವುದರ ಜೊತೆಗೆ ಸದರಿ ಉದ್ಯಮದ ಸಮಗ್ರ ಬೆಳವಣಿಗೆಗೆ